ಬಂದಿದ್ದರು. "ಮನಿಗೆ ಮದಲನೇ ಸರ್ತಿ ಕಾರ್ ಬಂದದರಿ. ಅದಕ್ಕ ಇವರ್ನ ಹಿಡದಾವ್ರಿಲ್ಲ ನೋಡ್ರಿ" ಎಂದು ಅಣ್ಣ ಮಕ್ಕಳ ಪರ ವಹಿಸಿದರು. ಅಕ್ಕತಂಗಿಯರು ಬಂದು ವಿಶ್ವಾಸದಿಂದ ಮಾತನಾಡಿಸಿದರು. ಚಹಾ, ಉಪ್ಪಿಟ್ಟುಗಳ ಸೇವನೆಯ ನಂತರ ಬೀಳ್ಕೊಟ್ಟರು. "ಇಲ್ಲೀತನಕಾ ಬಂದೀರಿ. ನಾಳೆ ನಮ್ಮ ದೇವರು ಜೋತಿಬಾಕ್ಕ ಹೊಂಟೇವಿ. ನೋಡಕೊಂಡು ಹೋಗೀರೆಂತ" ಎಂದು ಒತ್ತಾಯಿಸಿದರು. ಕೊನೆಗೆ ನನ್ನ ಶಿಷ್ಯನೇ, "ಅವರಿಗೆ ಅರ್ಜಂಟ್ ಆಗಿ ಅವರ ಮಾಮಾನ ಕಡೆ ಹೋಗೂದದ. ಮತ್ತೊಮ್ಮೆ ಕರಕೊಂಡು ಬರ್ತೇನಂತ" ಎಂದು ಹೊರಡಿಸಿದ.

ಈಗ ಸೀದಾ ಬೆಳಗಾವಿಯ ದಾರಿ ಹಿಡಿದಿದ್ದೆವು. "ಸರ್, ನಮ್ಮನಿ, ಮಂದಿ ಹೆಂಗನಸಿದ್ರು?" ಎಂದು ಕೇಳಿದ ಶಿಷ್ಯ. "ಭಾಳ ಭೋಲೊ ಇದ್ದಾರಪಾ. ಮನೀ ತ್ವಾಟಾ ಎಲ್ಲಾ ಮಸ್ತ ಅವ. ನಿನಗೇನಿಲ್ಲೆ ರಾಜೋಪಚಾರ. ನೀ ಇಲ್ಲೆ ರಾಜಾನ ಖರೆ" ಎಂದೆ. "ಇಲ್ಲಷ್ಟರೀ, ಬೆಂಗಳೂರಿನ ಕಂಪನ್ಯಾಗ ನನ್ನ ಕಥಿ ಗೊತ್ತದಲಾ?" ಎಂದು ನಕ್ಕ. ಕಾರು ಆಗಲೇ ವಿಟಿಯು ದಾಟಿ ಮುನ್ನುಗ್ಗುತ್ತಿತ್ತು. "ಸರ್, ತಡಾ ಭಾಳ ಆಗೇದ್ರಿ. ಮನಿ ಎಲ್ಲಿ ಹೇಳ್ರಿ?" ಎಂದ. ಹರಿ ಮಂದಿರದ ನಂತರ ನನಗೂ ಕೊಂಚ ಗೊಂದಲವೇ. ಮಾಮಾ ಒಂದು ವರ್ಷದ ಹಿಂದೆಯೇ ಮನೆ ಬದಲಾಯಿಸಿದ್ದ. ಅದಕ್ಕೇ "ನೀ ನನ್ನ ಹರಿ ಮಂದಿರಕ್ಕ ಬಿಟ್ಟ ಬಿಡು. ಒಂದ ನಿಮಿಷದ ಹಾದಿ. ನಾ ಹೋಗ್ತೇನಿ" ಎಂದೆ. ಒಂದು ಕ್ಷಣ ನನ್ನ ಮುಖ ನೋಡಿದವನೇ "ಹಂಗ ಮಾಡ್ರಿ" ಎಂದ. ಆಗ ನನಗೇನು ತೋಚಿತೋ "ನೀ ಹೇಳಿದ ಕಥಿ... ಯಾಕೋ ಖರೇ ಅನಸವಲ್ತು" ಎಂದೆ. "ನಿಮಗ್ಯಾಕ ಹಂಗನಿಸ್ತು? ಅದು ಖರೇನ ನಮ್ಮೂರಾಗ ನಡದದ್ದು" ಎಂದು ನನ್ನತ್ತಲೇ ನೋಡುತ್ತ ಒಪ್ಪಿಟ್ಟುಕೊಂಡ. "ನೀ ಕಥಿ ಕಟ್ಟಿ ಹೇಳೋದ ಜಾಸ್ತಿ. ಅದಕ್ಕ ನನ್ನ ಮಳ್ಳ ಮಾಡ್ಲಿಕ್ಕೆ ಕಟ್ಟಿ ಹೇಳಿಧಂಗ ಅನಸ್ತದಪಾ. ಇಲ್ಲಾಂದ್ರ ಯಾವ ತಂದಿ... ಮಗಳ್ನ..." ಎನ್ನುತ್ತ ಅವನತ್ತ ಗಂಭೀರವಾಗಿ ನೋಡಿದೆ. ಅವನ ಮುಖ ಕೋಪದಿಂದ ಕೆಂಪಾಗಿತ್ತು. "ಸರ್, ನೀವು ಸಂಶಯಾ ಪಡಾತೀರಂತ ಹೇಳಾತೇನಿ. ಅದು ನಮ್ಮನೀದ ಕಥಿ. ನಿಮಗ ತ್ವಾಟಾ ತೋರಿಸಿದಾವ ತುಕಾದಾದಾ. ನಿಮ ಜೋಡಿ ಕೂತು ಛಾ ಕುಡದಾಂವ ಬಾಳೂದಾದಾ. ಉಪ್ಪಿಟ್ಟು ತಂದು ಕೊಟ್ಟಾಕಿ ನೀಲೂ. ನಿಮಗ ಛಾ ಕೊಟ್ಟು 'ಎರಡ ದಿನಾ ಇದ್ದು ಹೋಗೀರೆಂತ' ಅಂದ್ಲಲಾ ಅಕೀನ... ಗಂಗಾ. ನಾನ ಗಂಗಾನ ಮಗ ರಾಜೂ, ರಾಜೇಶ. ಅಕಿ ನಮ್ಮೆಲ್ಲಾರಿಗೂ ಅಕ್ಕಮ್ಮ. ಅಕ್ಕನೂ ಹೌದು, ಅಮ್ಮನೂ ಹೌದು. ಆದರ ನೀವು... ನೀವು... ಇದನ್ನೆಲ್ಲಾ ಹೊಟ್ಯಾಗಿಟಗೋರಿ. ಹೊರಗ ಹಾಕಬ್ಯಾಡ್ರಿ" ಎಂದು ವ್ಯಗ್ರನಾಗಿ ನನ್ನನ್ನೇ ನೋಡಿದ. ನಾನು ಬೆಕ್ಕಸ ಬೆರಗಾಗಿದ್ದೆ. ಕಾರು ಆಗಲೇ ಹರಿ ಮಂದಿರದ ಮುಂದೆ ನಿಂತಿತ್ತು. ಇಳಿದು ಬ್ಯಾಗೆತ್ತಿಕೊಂಡೆ. ರಾಜು ಒಳಗಿಂದಲೇ ಕೈಬೀಸಿ ಹೊರಟೇ ಹೋದ. ನಾನು ನೋಡುತ್ತಲೇ ನಿಂತಿದ್ದೆ.


## ಮಧುರಾ ಕರ್ಣಮ್

ಕತೆಗಾರ್ತಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ–ಬಿ.ಎಸ್ಸಿ, ಎಲ್‌ಎಲ್.ಬಿವರೆಗೆ. ಕತೆ, ಹಾಸ್ಯ, ಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...' 'ಆಕ್ರಮಣ' ಅವರ ಕೆಲವು ಕೃತಿಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.